888

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 16ನೇ ನವಂಬರ್ 1889.

ಸ್ಯ 1878ನೇ ಇಸವಿ ಮೈಸೂರ ಫಾರೆಸ್ಟು ರೂಲ್ಸಿನ 2ನೇ ಅಧ್ಯಾಯ 12ನೇ ಸೆಕ್ಷನ್ ಅನುಸರಿಸಿ, ತಿಮ್ಮಾರ್ಪೇಷ್ ಮಾಡಿದ ಕುಕ್ಕುವಾಡ, ಉಬ್ರಾಣಿ, ಮನ್ನಾ ಜಂಗಲ್‌ವಳಗೆ ಈ ಕೆಳಗೆ ನಮೂದಿಸಿರುವ ರಸ್ತೆಗಳ ತಿವಾಯಿ ಹಾಲೀ ಉಪಯೋಗದಲ್ಲಿರುವ ಇತರ ಯಲ್ಲಾ ರಸ್ತೆಗಳೂ, ಛಂಡೀದಾರಿಗಳೂ ಮತ್ತು ಕಾಲುಹಾದಿಗಳೂ ಸಪ ಸಕಲ ಜನರಿಗೂ ಇದರಿಂದ ಬಂದ್ ಮಾಡಲ್ಪಟ್ಟಿರುತ್ತದೆ.

1. ಜೋಳದ ಹಳ್ಳಿನಿಂದ ಕುಕ್ಕುವಾಡಮ್ಮನ ಗುಡಿ ಮಾರ್ಗವಾಗಿ ಮಳಲ್‌ಭಾವಿ ವರವಿಗೆ.
2. ಬೆಂಕ್ಕಿಪುರದಿಂದ ಗಂಗೂರ ಮಾರ್ಗವಾಗಿ ಮಳಲ್‌ಭಾವಿಗೆ.
3. ಗಂಗೂರಿಂದ ನುಲೆಬ್ಬಲಿ ಮಾರ್ಗವಾಗಿ ದಾನವಾಡಿಗೆ.
4. ಗಂಗೂರಿಂದ ದೊಡ್ಡೇರಿ ಮಾರ್ಗವಾಗಿ ಹಾವಿಗೆರೆಗೆ.
5. ಮಾವಿನಹೊಳೇ ಯಿಂದ ಬಿದರೆಮಲ್ಲೇನಹಳ್ಳಿ ಮಾರ್ಗವಾಗಿ ಕುಕ್ಕುವಾಡಮ್ಮನಗುಡಿಗೆ.
6. ಉಬ್ರಾಣಿಯಿಂದ ಮಳಲ್‌ಭಾವಿಗೆ.

ಸ್ಯ 1890ನೇ ಇಸವಿ ಜನವರೀ ಗುರ್ಯೇ ಲಾಗಾಯತು ಇಲ್ಲಿ ನಮೂದಾದ ರಸ್ತೆಗಳ ತಿವಾಯಿ ಇತರ ರಸ್ತೆಮೇಲೆ ಯಾ ಕಾಲದಾರೀ ಮೇಲೆ ಯಾರಾದರೂ ಹೋದ ಪಕ್ಷಕ್ಕೆ ಮನ್ನಾ ಜಂಗಲ್ ವಳಗೆ ಅತಿಕ್ರಮ ಪ್ರವೇಶವೆಂದು ಎಣಿಸಲ್ಪಟ್ಟು ನ್ಯಾಯವಾಗಿ ಶಿಕ್ಷೆಗೆ ಗುರಿಮಾಡಲ್ಪಡುವರು.

ಕಬ್ಬಿಣ ಕರಗಿಸುವವರು ಕಬ್ಬಿಣದ ಕಲ್ಲು ತರುವದಕ್ಕೋಸ್ಕರವೂ ಮನ್ನಾ ಜಂಗಲ್ ವಳಗೆ ಯಿರುವ ಇತರ ವೃತ್ತಿಯನ್ನು ತಗದುಕೊಳ್ಳುವದಕ್ಕೆ ಸ್ವತಂತ್ರವನ್ನು ಪಡದಂಥಾ ಜನರು ಫಾರೆಸ್ಟು ಆಫಿಸರಿಂದ ಪ್ಯಾಸ್ ಪಡಿಯತಕ್ಕದ್ದು, ಮತ್ತು ಕೇಳಿದಾಗ ಸದರೀ ಪ್ಯಾಸನ್ನು ಹಾಜರ್ ಪಡಿಸುವದಕ್ಕೆ ಶಿದ್ಧವಾಗಿರಬೇಕು.

ನೋಟಿಸ್.

ತಾರೀಖು 17ನೇ ಡಿಸಂಬರ್ ಸ್ಯ 1889ನೇ ಇಸವಿ.

ಸ್ಯ 1878ನೇ ಇಸವಿ ಜೂ 8ನೇ ಮರ್ತು ಮಿನ ಫಾರೆಸ್ಟ್ ರೂಲ್ಸ್ 13ನೇ ನಿಬಂಧನೆಗಳನ್ನನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ನಮೂದಾದ ಪಟ್ಟಿಯಿಂದ ಕಾಪಾಡಲ್ಪಟ್ಟ ತುಮಕೂರು ಡಿಸ್ಟ್ರಿಕ್ಟು ಸರಕಾರಿ ಜಂಗಲಿಗಳನ್ನು ಮತ್ತು ಪ್ಲಾಂಟೇಷನ್‌ಗಳನ್ನು ಷಿಕಾರಿಗಳಿಗೂ ಅಂಬುಗಾರ್ರು ಯಾ ಬ್ಯಾಟೆಗಾರ್ರಿಗೂ ಬಂದ್ ಮಾಡಲ್ಪಟ್ಟಿರುತ್ತೆ. ಯಾವ ವನುಷ್ಯ ಅಥವಾ ಮನುಷ್ಯರುಗಳಾಗಲಿ ಇ೯ಫಾರ್ಮ್ ಫಾರೆಸ್ಟ್ ಆಫಿಸರವರ ಲಿಖಿತ ಮೂಲಕ ಅಪ್ಪಣೆ ತಿವಾಯಿ ಅಕ್ವಿಜೆ ಜಂಗ್ಲಿಗಳಲ್ಲೂ ಮತ್ತು ಪ್ಲಾಂಟೇಷನ್‌ಗಳಲ್ಲೂ ಮೇಲ್ಕಂಡ ಬ್ಯಾಟಿ ವಗೈರೆ ಬಗ್ಗೆ ಪ್ರವೇಶ ಮಾಡಕೂಡದು.

	ಫಾರೆಸ್ಟ್ ವ ಪ್ಲಾಂಟೇಷನ್.		ತಾಲ್ಲೂಕು.
1.	ದೇವರಾಯದುರ್ಗ ಸ್ಟೇಟ್ ಫಾರೆಸ್ಟ್	..	ತುಮಕೂರು ತಾಲ್ಲೂಕು.
2.	ಮದ್ದಗಿರಿ ಡಿಟೋ	..	ಮದ್ದಗಿರಿ ತಾಲ್ಲೂಕು.
3.	ಹುಲಿಯೂರ್‌ದುರ್ಗ ಡಿಟೋ	..	ಕುಣಿಗಲ್ ತಾಲ್ಲೂಕು.
4.	ಬುಕ್ಕಾಪಟ್ಣ ಡಿಟೋ	..	ಶಿರಾ, ಗುಬ್ಬಿ, ಮತ್ತು ಹಿರಿಯೂರು ತಾ||
5.	ಗೊಲ್ಲಹಳ್ಳಿ, ಮಲ್ಲಸಂದ್ರ ಪ್ಲಾಂಟೇಷನ್	..	ತುಮಕೂರು ತಾಲ್ಲೂಕು.
6.	ಬಳ್ಳಾಪುರ ಡಿಟೋ	..	ಡಿಟೋ
7.	ದಾಸರಹಳ್ಳಿ ಡಿಟೋ	..	ಡಿಟೋ
8.	ಲಿಂಗೇನಹಳ್ಳಿ ಡಿಟೋ	..	ಡಿಟೋ
9.	ಗಂಟಿಗೇನಹಳ್ಳಿಸಂದಲ್ ಡಿಟೋ	.	ಕೊರಟಿಗೆರೆ ಸಬ್ ತಾಲ್ಲೂಕು.
10.	ಹಾಲಕೆರೆ ಡಿಟೋ	..	ಕುಣಿಗಲ್ ತಾಲ್ಲೂಕು.

ಪ್ರತಿ ವರುಷ ಬಿಸಲುಕಾಲ ಅಂದರೆ ಫಿಬ್ರವರಿ ಗುರ್ಯೆ ಲಾಗಾಯತು ಮೇ 31ರ.ವರಿಗೆ ಮೇಲ್ಕಂಡ ಅಪ್ಪಣೆ ಕೊಡಲ್ಪಡುವದಿಲ್ಲವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.